ಇತ್ತ ಮನೆಗೆ ಅನತಿ ದೂರದಲ್ಲಿದ್ದ ಪಾರ್ಕಿನ ಬೆಂಚ್ ಮೇಲೆ ಕುಳಿತು ದುಃಖಿಸುತ್ತಿದ್ದ ಸಿದ್ಲಿಂಗನೊಳಗಿದ್ದ ಆದರ್ಶ ಪುರುಷ ಮತ್ತೆ ಜಾಗೃತನಾಗಿ, 'ಪಾಪ! ಇದರಲ್ಲಿ ಗೌರಿಯದೇನು ತಪ್ಪು? ತಾನು ಈಗ ಪೋಲಿಯೋ ಪೀಡಿತನಾಗಿರುವುದರಲ್ಲಿ ತನ್ನ ತಪ್ಪು ಹೇಗಿಲ್ಲವೋ ಅದೇ ರೀತಿ ಗೌರಿ 'ತೃತೀಯ ಲಿಂಗಿ' ಆಗಿರುವುದರಲ್ಲಿ ಅವಳ ತಪ್ಪಾಗಲಿ ಅಥವಾ ಅವರ ತಂದೆ ತಾಯಿ ತಪ್ಪಾದರೂ ಏನು? ಅಷ್ಟಕ್ಕೂ ಗೌರಿ 'ಹೀಗೆ' ಎಂದು ಗೊತ್ತಾದ ಮೇಲೆ ಅವಳ ಅಪ್ಪ ಅಮ್ಮ ಏನು ಮಾಡಬೇಕಿತ್ತು? ಕುತ್ತಿಗೆ ಹಿಚುಕಿ ಗೌರಿಯನ್ನು ಕೊಂದು ಹಾಕಬೇಕಿತ್ತೆ? ಯಾವ ತಂದೆ ತಾಯಿ ಹಾಗೆ ಮಾಡುತ್ತಾರೆ? ಹೆತ್ತ ತಪ್ಪಿಗೆ ಇಷ್ಟು ವರ್ಷ ತಮ್ಮೆದೆ ಕಲ್ಲು ಮಾಡಿಕೊಂಡು ಸಾಕಿ ಸಲಹಿರುವ ಅವ್ರಿಗೆ ಎಷ್ಟು ಕಷ್ಟ ಆಗಿರಬೇಡ?' ಹೀಗೆಲ್ಲಾ ಅನಿಸುತ್ತಿರಲು ಸಿದ್ಲಿಂಗ ಭಾವನೆಗಳ ತಾಕಲಾಟಕ್ಕೆ ಜರ್ಜರಿತನಾದನು. ಒಮ್ಮೊಮ್ಮೆ ತಾನು ಇಷ್ಟು ದಿನ ಹೆಣ್ಣಿನ ಸುಖ ಅನುಭವಿಸದೆ ಇದ್ದವನು ಈಗ ಗೌರಿಯನ್ನು ವರಿಸಿದ ತಪ್ಪಿಗೆ ಜೀವನಪರ್ಯಂತ ಬ್ರಹ್ಮಚಾರಿಯಾಗಿದ್ದು ಬಿಡಲೇ? ಅಪಾರ ಕರುಣೆ ತುಂಬಿ ತುಳುಕುವ ತನ್ನ ವಿಶಾಲ ಹೃದಯದಲ್ಲಿ ಗೌರಿಗೆ ಆಶ್ರಯವಿತ್ತು ನೋವು ನುಂಗಿ ವಿಷಕಂಠನಾಗಿ ಬಾಳು ಸಾಗಿಸಲೇ ಎಂಬ ಯೋಚನೆ ಹುಟ್ಟಿದರೂ ಮರುಕ್ಷಣ ಅದು ಸುಲಭಸಾಧ್ಯವಲ್ಲ ಎಂಬುದರ ಅರಿವು ಅವನಿಗೂ ಇತ್ತು. ಮದುವೆಗೂ ಮುಂಚೆ ಕಾಮದ ಉರಿಯನ್ನು ತಡೆಹಿಡಿಯಲು ಮುಂದೊಂದು ದಿನ ತನ್ನ ಮದುವೆಯಾದಾಗ ತನ್ನೆಲ್ಲಾ ಆಸೆಗಳನ್ನು ಪೂರೈಸಿಕೊಳ್ಳಬಹುದು ಎಂಬ ದೂರದ ಆಶಾಕಿರಣದ ಆಸರೆ ಇರುತ್ತಿತ್ತು. ಈಗ ಅಂಥದ್ದೇನೂ ಭರವಸೆಯ ಸೂಚನೆ ಇರದೆ ಜೀವನಪೂರ್ತಿ ತಾನು ಮದನನ ಬಾಣಗಳನ್ನೆದುರಿಸಿ ಗೆಲ್ಲಬಲ್ಲೆನೆ? ಎಂಬ ಪ್ರಶ್ನೆ ಬೃಹದಾಕಾರ ತಾಳಿ ಹೆದರಿಸತೊಡಗಿತು.

ಈ ಬಗೆಯ ತನ್ನೊಳಗಿನ ವಾದ ವಿವಾದಗಳ ಮಂಥನದಿಂದ ಸಿದ್ಲಿಂಗನಿಗೆ ಒಂದು ವಿಷಯ ಸ್ಪಷ್ಟವಾದಂತಾಯಿತು – ತಾನು ಎಷ್ಟೇ ಆದರ್ಶವಾದಿಯಾದರೂ ಸ್ವಂತ ಸುಖ ತ್ಯಜಿಸುವುದು ಅಸಾಧ್ಯವಷ್ಟೆ ಅಲ್ಲ, ಮೂರ್ಖತನದಿಂದ ಕೂಡಿದ್ದು ಎಂದು. ಈ ಪ್ರಕಾರವಾಗಿ ತನ್ನೊಳಗಿನ ಆದರ್ಶವಾದಿಯನ್ನು ಹಿಮ್ಮೆಟ್ಟಿಸಿದ ಸಿದ್ಲಿಂಗನು ಗೌರಿಯನ್ನು ತನ್ನ ಮನೆಯಿಂದಷ್ಟೇ ಅಲ್ಲದೆ ಜೀವನದಿಂದಲೇ ಓಡಿಸಿ ಮತ್ತೆ ಹೊಸ ಜೀವನ ಆರಂಭಿಸುವೆನು ಎಂದು ದೃಢ ನಿಶ್ಚಯದೊಂದಿಗೆ ಮನೆ ಕಡೆ ನಡೆದನು.

★★★

ಆ ತರುವಾಯ ಸಿದ್ಲಿಂಗು, ಅವನ ತಾಯಿ, ಚಿಕ್ಕಪ್ಪ ಚಿಕ್ಕಮ್ಮ ಮೊದಲಾದವರ ಮೇಲೆ ವರದಕ್ಷಿಣೆ ಕೇಸು ದಾಖಲಿಸಲ್ಪಟ್ಟು ವರ್ಷಗಟ್ಟಲೆ ಅವರೆಲ್ಲ ಕೋರ್ಟು ಕಚೇರಿ ಓಡಾಡಿ ಹೈರಾಣಾದರು.

ಈ ರೀತಿಯಾಗಿ ತಾವು ಮಾಡಿಲ್ಲದ ತಪ್ಪಿಗೆ, ಮೋಸಕ್ಕೆ ಗುರಿಯಾದವರೇ ಶಿಕ್ಷೆ ಅನುಭವಿಸಬೇಕಾಗಿ ಬಂತು ಎಂಬಲ್ಲಿಗೆ ಸಿದ್ಲಿಂಗು ಪರಿಣಯ ಕಥಾನಕವು ಪರಿಸಮಾಪ್ತಿಯಾದುದು.

## ಸೋಮು

ನೈಋತ್ಯ ರೈಲ್ವೆ ಇಲಾಖೆಯಲ್ಲಿ ಮುಖ್ಯ ಕಾರ್ಯಾಲಯ ಅಧೀಕ್ಷಕರಾಗಿರುವ ಸೋಮಶೇಖರ ಎಸ್. ಹಿರೇಮಠರು 'ಸೋಮು' ಎಂಬ ಹೆಸರಿನಲ್ಲಿ ಕತೆಗಳನ್ನು ಬರೆಯುತ್ತಾರೆ. ಇದುವರೆಗೆ ಅವರ ಎರಡು ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ಹುಬ್ಬಳ್ಳಿಯಲ್ಲಿ ನೆಲೆಸಿದ್ದಾರೆ.